ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 02-12-1993.

# *ನಂಬರ್‌ವನ್ ಆಗುವುದಕ್ಕೆ ಗುಣಮೂರ್ತಿಯಾಗಿ ಗುಣದಾನವನ್ನು ಮಾಡುವಂತಹ ಮಹಾದಾನಿಗಳಾಗಿ*

(नम्बरवन बनने के लिए-गुण मूर्त बन गुणों का दान करने वाले महादानी बनो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಮತ್ತು ಆ ಸಂಬಂಧಗಳ ಕರ್ತವ್ಯವನ್ನು ಬ್ರಾಹ್ಮಣ ಜೀವನದಲ್ಲಿ ನಿಭಾಯಿಸಿದಾಗ ಆತ್ಮಿಕ ಸ್ಥಿತಿ ಸಹಜವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅಚಲ ಮತ್ತು ಅಖಂಡ ಭವ! ಎಂಬ ವರದಾನವನ್ನು ಕೊಡುವ ಬಾಪ್‌ದಾದಾ ತನ್ನ ದಾನಿ ಮಹಾದಾನಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬೇಹದ್ದಿನ ತಾಯಿ ತಂದೆ ನಾಲ್ಕಾರು ಕಡೆಯ ವಿಶೇಷ ಮಕ್ಕಳನ್ನು ನೋಡಿದರು. ಏನು ವಿಶೇಷವನ್ನು ನೋಡಿದರು? ಅಕ್ಷಯ ಜ್ಞಾನಿ, ಅಚಲ ಸ್ವರಾಜ್ಯಾಧಿಕಾರಿ, ಅಖಂಡ ನಿರ್ವಿಘ್ನ, ಅಖಂಡ ಯೋಗಿ, ಅಖಂಡ ಮಹಾದಾನಿಯಾಗಿರುವ ವಿಶೇಷ ಆತ್ಮರು ಕೋಟಿಯಲ್ಲಿ ಕೆಲವರು ಮಾತ್ರ ಆಗಿದ್ದಾರೆ. ಜ್ಞಾನಿ, ಯೋಗಿ ಮಹಾದಾನಿ ಎಲ್ಲರೂ ಆಗಿದ್ದಾರೆ ಆದರೆ ಅಖಂಡ ಕೆಲಕೆಲವರಾಗಿದ್ದಾರೆ. ಯಾರು ಅಕ್ಷಯ, ಸ್ಥಿರ(ಅಚಲ) ಮತ್ತು ಅಖಂಡವಾಗಿದ್ದಾರೆಯೋ

ಅವರೇ ವಿಜಯ ಮಾಲೆಯ ವಿಜಯದ ಮಣಿಗಳು. ಬಾಪ್‌ದಾದಾರವರು ಸಂಗಮಯುಗದಲ್ಲಿ ಎಲ್ಲಾ ಮಕ್ಕಳಿಗೆ 'ಅಚಲ-ಅಖಂಡ ಭವ' ವರದಾನವನ್ನು ಕೊಟ್ಟಿದ್ದಾರೆ. ಆದರೆ ವರದಾನವನ್ನು ಜೀವನದಲ್ಲಿ ಧಾರಣೆ ಮಾಡುವುದರಲ್ಲಿ ನಂಬರ್‌ವಾರ್ ಆಗಿದೆಯಲ್ಲವೇ. ನಂಬರ್‌ಒನ್ ಆಗುವುದಕ್ಕೆ ಎಲ್ಲದಕ್ಕಿಂತ ಸಹಜ ವಿಧಿಯಾಗಿದೆ ಅಖಂಡ ಮಹಾದಾನಿಯಾಗಬೇಕು. ಅಖಂಡ ಮಹಾದಾನಿ ಅರ್ಥಾತ್ ನಿರಂತರ ಸೇವಾಧಾರಿ ಏಕೆಂದರೆ ಸಹಜವೇ ನಿರಂತರವಾಗುವುದಕ್ಕೆ ಸಾಧ್ಯ. ಅಖಂಡ ಸೇವಾಧಾರಿ ಅರ್ಥಾತ್ ಅಖಂಡ ಮಹಾದಾನಿ. ದಾತನ ಮಕ್ಕಳಾಗಿದ್ದೀರಿ. ಸರ್ವ ಖಜಾನೆಗಳಿಂದ ಸಂಪನ್ನ ಶ್ರೇಷ್ಠ ಸಂಪನ್ನರಾಗಿದ್ದೀರಿ. ಸಂಪನ್ನತೆಯ ಚಿಹ್ನೆ ಅಖಂಡ ಮಹಾದಾನಿ. ಒಂದು ಸೆಕೆಂಡ್ ಕೂಡ ದಾನ ಕೊಡದೇ ಇರಲು ಸಾಧ್ಯವಿಲ್ಲ. ದ್ವಾಪರದಿಂದ ಅನೇಕ ಭಕ್ತರು ಸಹ ದಾನಿ ಆತ್ಮರಾಗಿದ್ದಾರೆ ಆದರೆ ಎಷ್ಟೇ ದೊಡ್ಡದಾಗಿರಬಹುದು, ಅಕ್ಷಯ ಖಜಾನೆಗಳ ದಾನಿಯಾಗಿಲ್ಲ. ವಿನಾಶಿ ಖಜಾನೆಗಳು ಅಥವಾ ವಸ್ತುಗಳ ದಾನಿಯಾಗುತ್ತಾರೆ. ತಾವು ಶ್ರೇಷ್ಠ ಆತ್ಮರು ಈಗ ಸಂಗಮದಲ್ಲಿ ಅಕ್ಷಯ ಮಹಾದಾನಿ ಆಗುತ್ತೀರಿ. ತಮ್ಮನ್ನು ತಾವು ಕೇಳಿಕೊಳ್ಳಿ ಅಖಂಡ ದಾನಿಯಾಗಿದ್ದೀರಾ? ಅಥವಾ ಸಮಯ ಪ್ರಮಾಣ ದಾನಿಯಾಗಿದ್ದೀರಾ?

ಅಖಂಡ ಮಹಾದಾನಿಗಳು ಮೂರು ವಿಧವಾದ ದಾನಗಳಲ್ಲಿ ವ್ಯಸ್ತವಾಗಿರುತ್ತಾರೆ. ಮೊದಲು 1.ಮನಸ್ಸಿನ ಮೂಲಕ ಶಕ್ತಿಗಳ ದಾನ. ಶಕ್ತಿಯನ್ನು ಕೊಡುವಂತಹ ದಾನ, 2.ವಾಣಿಯ ಮುಖಾಂತಾರ ಜ್ಞಾನ ದಾನ, 3.ಕರ್ಮಗಳ ಮುಖಾಂತರ ಗುಣದಾನ. ಈ ಮೂರು ವಿಧವಾದ ದಾನವನ್ನು ಕೊಡುವಂತಹವರು ಸಹಜವಾಗಿ ಮಹಾದಾನಿ ಆಗಬಹುದು. ಫಲಿತಾಂಶವನ್ನು ನೋಡಿದಾಗ ವಾಣಿಯ ಮುಖಾಂತರ ಜ್ಞಾನದ ದಾನವನ್ನು ಮೆಜಾರಿಟಿ ಮಾಡುತ್ತಿರುತ್ತೀರಿ. ಮನಸ್ಸಿನ ಮುಖಾಂತರ ಶಕ್ತಿಗಳ ದಾನವನ್ನು ಯಥಾ ಶಕ್ತಿ ಮಾಡುತ್ತಿರುತ್ತೀರಿ ಮತ್ತು ಕರ್ಮದ ಮುಖಾಂತರ ಗುಣದ ದಾನ ಬಹಳ ಕಡಿಮೆ ಮಾಡುವಂತಹವರಿದ್ದಾರೆ. ವರ್ತಮಾನ ಸಮಯ ಭಲೆ ಅಜ್ಞಾನಿ ಆತ್ಮರಿರಬಹುದು ಭಲೆ ಬ್ರಾಹ್ಮಣ ಆತ್ಮರಿರಬಹುದು ಇಬ್ಬರಿಗೂ ಗುಣದಾನದ ಅವಶ್ಯಕತೆ ಇದೆ. ವರ್ತಮಾನ ಸಮಯ ವಿಶೇಷ ಸ್ವಯಂನಲ್ಲಿ ಅಥವಾ ಬ್ರಾಹ್ಮಣ ಪರಿವಾರದಲ್ಲಿ ಈ ವಿಧಿಯನ್ನು ತೀವ್ರ ಮಾಡಿಕೊಳ್ಳಬೇಕು.

ಈ ದಿವ್ಯ ಗುಣ ಎಲ್ಲದಕ್ಕಿಂತ ಶ್ರೇಷ್ಠವಾದ ಪ್ರಭು ಪ್ರಸಾದವಾಗಿದೆ. ಈ ಪ್ರಸಾದವನ್ನು ಎಲ್ಲರಿಗೂ ಚೆನ್ನಾಗಿ ಹಂಚಿ. ಯಾರನ್ನಾದರೂ ಭೇಟಿ ಮಾಡಿದಾಗ ಒಬ್ಬಿಬರಲ್ಲಿ ಸ್ನೇಹದ ಚಿಹ್ನೆಗಾಗಿ ಸ್ಥೂಲ ಪ್ರಸಾದವನ್ನು ತಿನ್ನಿಸುತ್ತಿರಿ ತಾನೆ, ಹಾಗೆಯೇ ಒಬ್ಬರಿಗೂಬ್ಬರು ಈ ಗುಣಗಳ ಪ್ರಸಾದವನ್ನು ತಿನ್ನಿಸಿ. ಈ ವಿಧಿಯಿಂದ ಸಂಗಮಯುಗದ ಲಕ್ಷ್ಯವಾದ "ಫರಿಶ್ತಾ ಸೊ ದೇವತೆ". ಇದು ಸಹಜವಾಗಿ ಸರ್ವರಲ್ಲಿ ಪ್ರತ್ಯಕ್ಷವಾಗಿ ಕಂಡು ಬರುತ್ತದೆ. ಈ ಅಭ್ಯಾಸವನ್ನು ನಿರಂತರ ಸ್ಮೃತಿಯಲ್ಲಿಟ್ಟುಕೊಳ್ಳಬೇಕು. ನಾನು ದಾತನ ಮಗು ಅಖಂಡ ಮಹಾದಾನಿ ಆತ್ಮ ಆಗಿದ್ದೇನೆ. ಭಲೆ ಯಾವುದೇ ಅಜ್ಞಾನಿಯಿರಬಹುದು, ಬ್ರಾಹ್ಮಣರಿರಬಹುದು ಆದರೆ ಕೊಡಲೇಬೇಕಾಗಿದೆ. ಬ್ರಾಹ್ಮಣಾತ್ಮರಿಗೆ ಜ್ಞಾನವಂತೂ ಮೊದಲಿನಿಂದಲೂ ಇದೆ ಆದರೆ ಎರಡು ಪ್ರಕಾರದ ದಾತರಾಗಬಹುದು. 1 ಯಾವ ಆತ್ಮನಿಗೆ ಯಾವ ಶಕ್ತಿಯ ಅವಶ್ಯಕತೆಯಿದೆಯೋ ಆ ಆತ್ಮನಿಗೆ ಮನಸಾ ಮುಖಾಂತರ ಅರ್ಥಾತ್ ಶುದ್ಧ ವೃತ್ತಿ, ಪ್ರಕಂಪನಗಳ ಮುಖಾಂತರ ಶಕ್ತಿಗಳ ದಾನ ಅರ್ಥಾತ್ ಸಹಯೋಗವನ್ನು ಕೊಡಿ. 2.ಕರ್ಮದ ಮುಖಾಂತರ ಸದಾ ಸ್ವಯಂನ ಜೀವನದಲ್ಲಿ ಗುಣಮೂರ್ತಿಗಳಾಗಿ.

ಪ್ರತ್ಯಕ್ಷ ಮಾದರಿಯಾಗಿ ಅನ್ಯರಿಗೂ ಸಹಜ ಗುಣವನ್ನು ಧಾರಣೆ ಮಾಡುವುದಕ್ಕೆ ಸಹಯೋಗವನ್ನು ಕೊಡಿ. ಇದಕ್ಕೆ ಗುಣದಾನ ಎಂದು ಹೇಳಲಾಗುತ್ತದೆ. ದಾನದ ಅರ್ಥವಾಗಿದೆ ಸಹಯೋಗವನ್ನು ಕೊಡುವುದು. ಇತ್ತೀಚೆಗೆ ಬ್ರಾಹ್ಮಣ ಆತ್ಮರು ಕೇಳುವುದರ ಬದಲು ಪ್ರತ್ಯಕ್ಷ ಪ್ರಮಾಣವನ್ನು ನೋಡಲು ಇಚ್ಛಿಸುತ್ತಾರೆ. ಯಾರಿಗಾದರು ಶಕ್ತಿಯ ಧಾರಣೆ ಅಥವಾ ಗುಣ ಧಾರಣೆ ಮಾಡುವಂತಹ ಶಿಕ್ಷಣವನ್ನು ಕೊಡುವುದಕ್ಕೆ ಇಚ್ಛಿಸುತ್ತಿರೆಂದರೆ ಕೆಲವರು ಮನಸ್ಸಿನಲ್ಲಿ ಯೋಚನೆ ಮಾಡುತ್ತಾರೆ. ಕೇಲವರು ಹೇಳುತ್ತಾರೆ ಇಂತಹ ಧಾರಣಾಮೂರ್ತಿ ಯಾರಾಗಿದ್ದಾರೆ? ಅಂತವರನ್ನು ನೋಡುವುದಕ್ಕೆ ಬಯಸುತ್ತಾರೆ ಆದರೆ ಕೇಳುವುದಕ್ಕೆ ಇಷ್ಟ ಪಡುವುದಿಲ್ಲ. ಈ ರೀತಿ ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿರಲ್ಲವೇ?- ಯಾರಾಗಿದ್ದಾರೆ. ಎಲ್ಲರನ್ನು ನೋಡಿಬಿಟ್ಟೆ.... ಯಾವಾಗ ಯಾವುದೇ ಮಾತು ಬರುತ್ತದೆಯೆಂದರೆ ಹೇಳುತ್ತಾರೆ. ಯಾರು ಆಗಿಯೇ ಇಲ್ಲ. ಎಲ್ಲವೂ ನಡೆಯುತ್ತದೆ ಎಂದು. ಆದರೆ ಇವು ನಿರ್ಲಕ್ಷ್ಯದ ಮಾತಾಗಿದೆ. ಯಥಾರ್ತವಾಗಿಲ್ಲ. ಯಥಾರ್ತ ಯಾವುದಾಗಿದೆ? ಫಾಲೋ ಬ್ರಹ್ಮಾ ತಂದೆ. ಹೇಗೆ ಬ್ರಹ್ಮಾ ತಂದೆಯು ಸ್ವಯಂ, ಸದಾ ತಮ್ಮನ್ನು ನಿಮಿತ್ತ ಉದಾಹರಣೆಯಾಗಿ ಮಾಡಿಕೊಂಡರು ಸದಾ ಈ ಲಕ್ಷ್ಯ ಲಕ್ಷಣದಲ್ಲಿ ತಂದರು- ಯಾರು ಮೊದಲೋ ಅವರೇ ಅರ್ಜುನರು ಎಂದು. ಅರ್ಥಾತ್ ಯಾರು ಸ್ವಯಂನ್ನು ನಿಮಿತ್ತ ಪ್ರತ್ಯಕ್ಷ ಪ್ರಮಾಣವನ್ನಾಗಿ ಮಾಡಿಕೊಳ್ಳುತ್ತಾರೆಯೋ ಅವರೇ ಅರ್ಜುನ, ಮೊದಲನೇಯ ನಂಬರ್‌ನವರು ಆಗುತ್ತಾರೆ. ಒಂದುವೇಳೆ ಫಾಲೋ ಫಾದರ್ ಮಾಡಬೇಕೆಂದರೆ ಅನ್ಯರನ್ನು ನೋಡಿ ಆಗುವುದರಲ್ಲಿ ನಂಬರ್‌ಒನ್ ಆಗುವುದಿಲ್ಲ. ನಂಬರ್‌ವಾರ್ ಆಗಿ ಬಿಡುತ್ತೀರಿ, ನಂಬರ್‌ಒನ್ ಆತ್ಮನ ಚಿಹ್ನೆಯಾಗಿದೆ ಪ್ರತಿ ಶ್ರೇಷ್ಠ ಕಾರ್ಯದಲ್ಲಿ ನಾನು ನಿಮಿತ್ತನಾಗಿ ಅನ್ಯರಿಗೆ ಆ ಕಾರ್ಯ ಸರಳವಾಗುವುದಕ್ಕೆ ಮಾದರಿಯಾಗಬೇಕು. ಅನ್ಯರನ್ನು ನೋಡುವುದು, ಭಲೇ ದೊಡ್ಡವರನ್ನು ಚಿಕ್ಕವರನ್ನು, ಸಮಾನವಾದವರನ್ನು ಯಾರನ್ನಾದರೂ ಆಗಿರಬಹುದು, ಇತರರನ್ನು ನೋಡಿ ಮೊದಲು ಇವರು ತಯಾರಾದರೆ ನಾನು ತಯಾರಾಗುವೆನು ಎಂದುಕೊಂಡರೆ ಯಾರಾದರೇ ತಯಾರಾಗಿರುವರೋ ಅವರು ಮೊದಲ ನಂಬರ್ ಆಗುತ್ತಾರೆ. ಆಗ ನೀವು ಸ್ವತಹವಾಗಿ ನಂಬರ್‌ವಾರ್ ಆಗಿಬಿಡುತ್ತೀರಿ. ಆದ್ದರಿಂದ ಅಖಂಡ ಮಹಾದಾನಿ ಆತ್ಮ ಸದಾ ತಮ್ಮನ್ನು ಪ್ರತಿ ಸೆಕೆಂಡ್ ಮೂರು ಮಹಾದಾನದಲ್ಲಿ ಯಾವುದಾದರು ಒಂದು ದಾನ ಮಾಡುವುದರಲ್ಲಿ ವ್ಯಸ್ತರನ್ನಾಗಿ ಇಟ್ಟುಕೊಳ್ಳುತ್ತಾರೆ. ಎಂತಹ ಸಮಯವೋ ಅಂತಹ ಸೇವೆಯಲ್ಲಿ ಸದಾ ಮಗ್ನವಾಗಿ ಇರುತ್ತಾರೆ. ಅವರಿಗೆ ವ್ಯರ್ಥವನ್ನು ನೋಡುವುದರಲ್ಲಿ ಕೇಳುವುದರಲ್ಲಿ ಅಥವಾ ಮಾಡುವುದರಲ್ಲಿ ಸಮಯವಿರುವುದಿಲ್ಲ. ಹಾಗಾದರೆ ಮಹಾದಾನಿಗಳಾಗಿದ್ದೀರಾ? ಈಗ ಅಂಡರ್ ಲೈನ್ ಮಾಡಿ ಅಖಂಡರಾಗಿದ್ದೇವೆಯೇ? ಒಂದುವೇಳೆ ಮಧ್ಯ ಮಧ್ಯದಲ್ಲಿ ದಾತಾತನದ ಖಂಡನೆಯಾಗುತ್ತದೆಯೆಂದರೆ ಖಂಡಿತ ಸಂಪೂರ್ಣರೆಂದು ಹೇಳಲಾಗುವುದಿಲ್ಲ. ವರ್ತಮಾನ ಸಮಯ ಪರಸ್ಪರದಲ್ಲಿ ವಿಶೇಷ ಕರ್ಮದ ಮುಖಾಂತರ ಗುಣದಾತರಾಗುವ ಅವಶ್ಯಕತೆಯಿದೆ. ಪ್ರತಿಯೊಬ್ಬರು ಸಂಕಲ್ಪವನ್ನು ಮಾಡಬೇಕು ನಾನು ಸದಾ ಗುಣಮೂರ್ತನಾಗಿ ಎಲ್ಲರನ್ನು ಗುಣಮೂರ್ತಿಯನ್ನಾಗಿ ಮಾಡುವಂತಹ ವಿಶೇಷ ಕರ್ತವ್ಯವನ್ನು ಮಾಡಲೇಬೇಕಾಗಿದೆ. ಸ್ವಯಂನ ಮತ್ತು ಸರ್ವರ ನಿರ್ಬಲತೆಯನ್ನು ಸಮಾಪ್ತಿ ಮಾಡುವುದಕ್ಕೆ ಈ ವಿಧಿಯಲ್ಲಿ ಪ್ರತಿಯೊಬ್ಬರು ತಮ್ಮನ್ನು ನಿಮಿತ್ತ ಮೊದಲನೇ ನಂಬರ್ ಎಂದು ತಿಳಿದು ಮುಂದುವರೆಯುತ್ತಾ ಹೋಗಿ, ಜ್ಞಾನವಂತು ಬಹಳಷ್ಟಿದೆ. ಈಗ ಗುಣಗಳನ್ನು ಇಮರ್ಜ್

ಮಾಡಿಕೊಳ್ಳಬೇಕು, ಸರ್ವ ಗುಣ ಸಂಪನ್ನರಾಗುವುದರಲ್ಲಿ ಮತ್ತು ಮಾಡುವುದರಲ್ಲಿ ಉದಾಹರಣೆಯಾಗಬೇಕು. ಒಳ್ಳೆಯದು.

***ಸರ್ವ ಅಖಂಡ ಯೋಗಿ ಆತ್ಮರಿಗೆ, ಸರ್ವ ಸದಾ ಗುಣಮೂರ್ತಿ ಆತ್ಮರಿಗೆ, ಸರ್ವ ಪ್ರತಿ ಸಂಕಲ್ಪ, ಪ್ರತಿ ಸೆಕೆಂಡ್. ಮಹಾದಾನಿ ಅಥವಾ ಮಹಾ ಸಹಯೋಗಿ ವಿಶೇಷ ಆತ್ಮರಿಗೆ, ಸದಾ ಸ್ವಯಂನ್ನು ಶ್ರೇಷ್ಠತೆಯಲ್ಲಿ ಮಾದರಿಯಾಗಿ ಸರ್ವಾತ್ಮರಿಗೆ ಸರಳ ಸಹಜ ಪ್ರೇರಣೆ ಕೊಡುವಂತಹ, ಸದಾ ಸ್ವಯಂನ್ನು ನಿಮಿತ್ತ ನಂಬರ್‌ಒನ್ ಎಂದು ತಿಳಿದು ಪ್ರತ್ಯಕ್ಷ ಪ್ರಮಾಣ ಕೊಡುವಂತಹ ತಂದೆಯ ಸಮಾನ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ.***

**ದಾದಿ ಜಾನಕಿಯವರ ಜೊತೆ ಭೇಟಿ:**

(ಆಸ್ಟ್ರೇಲಿಯಾ, ಸಿಂಗಾಪುರ್ ಇತ್ಯಾದಿಗಳ ಪ್ರವಾಸದ ಸಮಾಚಾರ ತಿಳಿಸಿದರು ಮತ್ತು ಎಲ್ಲರ ನೆನಪನ್ನು ಕೊಟ್ಟರು) ಎಲ್ಲರ ನೆನಪು ತಲುಪಿತು. ನಾಲ್ಕಾರು ಕಡೆಯ ಮಕ್ಕಳು ಸದಾ ತಂದೆಯ ಮುಂದೆ ಇದ್ದಾರೆ ಇದರ ಪ್ರತ್ಯಕ್ಷ ಪ್ರಮಾಣವಿದೆ ಯಾವಾಗಲೇ ನೆನಪು ಮಾಡಿದಾಗ ಸಮೀಪ ಮತ್ತು ಜೊತೆಯ ಅನುಭವ ಮಾಡುತ್ತೀರಿ. ಬಾಬಾರವರು ಹೇಳಿದರು ಹೃದಯದಿಂದ ಹೃದಯರಾಮ ಪ್ರತ್ಯಕ್ಷವಾಗಿದ್ದಾರೆ. ಇದಕ್ಕೆ ಹೇಳಲಾಗುತ್ತದೆ ಮಾಲೀಕರು ಪ್ರತ್ಯಕ್ಷವಾಗಿದ್ದಾರೆ. ಪ್ರತ್ಯಕ್ಷ ಮಾಲೀಕರಾಗಿದ್ದಾರೆ. ಎಲ್ಲೇ ಇರಿ ಯಾವುದೇ ಸ್ಥಾನದಲ್ಲಿ ಇರಿ ಆದರೆ ಪ್ರತಿ ಸ್ಥಾನದಲ್ಲಿ ಪ್ರತಿಯೊಬ್ಬರ ಹತ್ತಿರ ಪ್ರತ್ಯಕ್ಷರಾಗುತ್ತಾರೆ. ಈ ಕಾರಣ ಮಾಲೀಕ ಪ್ರತ್ಯಕ್ಷರಾಗಿ ಬಿಡುತ್ತಾರೆ. ಈ ಸ್ನೇಹದ ವಿಧಿ ಜನರು ತಿಳಿಯುವುದಕ್ಕೆ ಸಾಧ್ಯವಿಲ್ಲ. ಇಲ್ಲ ಬ್ರಾಹ್ಮಣ ಆಕ್ಕರೇ ತಿಳಿಯುತ್ತಾರೆ. ಅನುಭವಿ ಈ ಅನುಭವವನ್ನು ತಿಳಿಯುತ್ತಾರೆ. ತಾವು ವಿಶೇಷ ಅತ್ಮರಂತೂ ಕಂಬೈಂಗ್ ಅಲ್ಲವೇ. ಬೇರೆ ಆಗುವುದಕ್ಕೆ ಸಾಧ್ಯವಿಲ್ಲ. ಜನರು ಹೇಳುತ್ತಾರೆ ಎಲ್ಲಿ ನೋಡಿದರೂ ನೀನೆಂದರೆ ನೀನು ಮತ್ತು ತಾವು ಹೇಳುತ್ತೀರಿ ಏನು ಮಾಡುತ್ತೀರಿ, ಎಲ್ಲಿಗೆ ಹೋಗುತ್ತೀರಿ, ತಂದೆಯಂತೂ ಜೊತೆಯಲ್ಲೇ ಇದ್ದಾರೆ ಅರ್ಥಾತ್ ನೀನೆಂದರೆ ನೀನೆ. ಹೇಗೆ ಕರ್ತವ್ಯ ಜೊತೆಯಿದ್ದರೆ ಪ್ರತಿ ಕರ್ತವ್ಯವನ್ನು ಮಾಡಿಸುವಂತಹವರು ಸದಾ ಜೊತೆಯಲ್ಲೇ ಇದ್ದಾರೆ ಈ ಕಾರಣ ಗಾಯನವಿದೆ ಮಾಡಿ-ಮಾಡಿಸುವಂತಹವರೆಂದು, ಹಾಗಾದರೆ ಕಂಬೈಂಡ್ ಆಗಿರಲ್ಲವೇ - ಮಾಡುವಂತಹವರು ಮತ್ತು ಮಾಡಿಸುವಂತಹವರು. ಹಾಗಾದರೆ ತಮ್ಮೆಲ್ಲರ ಸ್ಥಿತಿ ಏನಾಗಿದೆ? ಕಂಬೆಂಡ್ ಆಗಿದೆಯಲ್ಲವೇ. ಮಾಡಿ- ಮಾಡಿಸುವಂತಹವರು ಮಾಡಿಸುವಂತಹವರ ಜೊತೆಯಲ್ಲಿಯೇ ಇದ್ದಾರೆ. ಮಾಡಿಸುವಂತಹವರು ಬೇರೆಯಿಲ್ಲ. ಇದಕ್ಕೆ ಕಂಬೈನ್ಡ್ ಸ್ಥಿತಿ ಎಂದು ಹೇಳಲಾಗುತ್ತದೆ. ಎಲ್ಲರು ತಮ್ಮ ತಮ್ಮ ಪಾತ್ರವನ್ನು ಅಭಿನಯಿಸುತ್ತಿದ್ದೀರಿ. ಅನೇಕ ಆತ್ಮರ ಮುಂದೆ ಮಾದರಿಯಾಗಿದ್ದೀರಿ ಸರಳ ಮಾಡುವುದಕ್ಕೆ. ಈ ರೀತಿ ಅನಿಸುತ್ತದೆಯಲ್ಲವೇ. ಕಷ್ಟವನ್ನು ಸಹಜವನ್ನಾಗಿ ಮಾಡುವುದೇ ಫಾಲೋ ಫಾದರ್ ಆಗಿದೆ. ಈ ರೀತಿಯಲ್ಲವೇ. ಒಳ್ಳೆಯ ಪಾತ್ರವನ್ನು ಅಭಿನಯಿಸಿದ್ದೀರಲ್ಲವೇ. ಎಲ್ಲೇ ಇದ್ದೀರಿ, ವಿಶೇಷ ಪಾತ್ರಧಾರಿಯಾಗಿ, ವಿಶೇಷ ಪಾತ್ರ ಮಾಡದೆ ಇರಲು ಸಾಧ್ಯವಿಲ್ಲ. ಇದು ಇಲ್ಲಿನ ಡ್ರಾಮಾದ ನೊಂದಣಿಯಾಗಿದೆ. ಒಳ್ಳೆಯದು. ಸುತ್ತಾಡುವುದು ಬಹಳ ಒಳ್ಳೆಯದಾಗಿದೆ. ಸುತ್ತಾಡಿದ್ದೀರಿ ನಂತರ ಮಧುರವಾದ ಮನೆಗೆ ಬಂದು ಬಿಟ್ಟಿದ್ದೀರಿ. ಸೇವೇಯ ಸುತ್ತಾಟ ಅನೇಕ ಅತ್ಮರ ಪ್ರತಿ ಉಮಂಗ ಉತ್ಸಾಹದ ಸುತ್ತಾಟಿಕೆಯಲ್ಲವೇ. ಎಲ್ಲವೂ ಸರಿಯಿದೆಯಲ್ಲವೇ? ಒಳ್ಳೆಯದೇ ಒಳ್ಳೆಯದಿದೆ. ಡ್ರಾಮಾದ ಭಾವಿ

ಅವಶ್ಯವಾಗಿ ಸೆಳೆಯುತ್ತದೆ ತಾವು ಇರುವುದಕ್ಕೆ ಇಷ್ಟ ಪಡುತ್ತೀರಿ? ಆದರೆ ಡ್ರಾಮಾದಲ್ಲಿ ಇಲ್ಲವೆಂದರೆ ಏನು ಮಾಡುವಿರಿ? ಯೋಚಿಸಿದರು ಹೋಗಲೇ ಬೇಕಾಗುತ್ತದೆ. ಏಕೆಂದರೆ ಸೇವೆಯ ಭಾವವಿದ್ದರೆ ತನ್ನ ಕಾರ್ಯವನ್ನು ಮಾಡಿಸಿಬಿಡುತ್ತದೆ. ಬರುವುದು ಹೋಗುವುದು ಇದೇ ವಿಧಿಯಾಗಿದೆ. ಒಳ್ಳೆಯದು ಸಂಘಟನೆ ಚೆನ್ನಾಗಿದೆಯೇ?

**ಅವ್ಯಕ್ತ ಬಾಪ್‍ದಾದಾರವರ ಜೊತೆ ವೈಯಕ್ತಿಕ ಭೇಟಿ**

1.ಪರಮಾತ್ಮನ ಪ್ರೀತಿಯ ಅನುಭವ ಮಾಡುವುದಕ್ಕೆ ದುಃಖದ ಅಲೆಗಳಿಂದ ಭಿನ್ನರಾಗಿ:- ಬಾಪ್‍ದಾದಾರವರು ಸಂಗಮದಲ್ಲಿ ಅನೇಕ ಖಜಾನೆಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ಖಜಾನೆಗಳಲ್ಲಿ ಶ್ರೇಷ್ಠಾತಿಶ್ರೇಷ್ಠ ಖಾಜಾನೆಯಾಗಿದೆ ಸದಾ ಖುಷಿಯ ಖಜಾನೆ. ಈ ಖುಷಿಯ ಖಜಾನೆ ಸದಾ ಜೊತೆಯಲ್ಲಿ ಇರುತ್ತದೆಯೇ? ಎಂತಹದ್ದೇ ಪರಿಸ್ಥಿತಿ ಬಂದು ಬಿಡಲಿ ಆದರೆ ಖುಷಿ ಮಾತ್ರ ಹೋಗುವುದಿಲ್ಲ. ಯಾವಾಗ ಯಾವುದೇ ದುಃಖದ ಅಲೆಯ ಪರಿಸ್ಥಿತಿ ಬಂದರೂ ಖುಷಿಯಿರುತ್ತದೆಯೇ ಅಥವಾ ಸ್ವಲ್ಪ ಸ್ವಲ್ಪ ಅಲೆ ಬಂದು ಬಿಡುತ್ತದೆಯೇ? ಏಕೆಂದರೆ ಸಂಗಮದಲ್ಲಿದ್ದೇವೆ. ಒಂದುಕಡೆಯಾಗಿದೆ ದುಃಖಧಾಮ, ಇನ್ನೊಂದು ಕಡೆಯಾಗಿದೆ ಸುಖಧಾಮ. ದುಃಖದ ಅಲೆಯ ಅನೇಕ ಮಾತು ಎದುರುಗಡೆ ಬರುತ್ತದೆ ಆದರೆ ತಮ್ಮ ಒಳಗಡೆ ಇರಬೇಕು ದುಃಖದ ಅಲೆ ದುಃಖಿಯನ್ನಾಗಿ ಮಾಡಬಾರದು. ಹೇಗೆ ಬೇಸಿಗೆಯ ಕಾಲದಲ್ಲಿ ಬಿಸಿಯಂತು ಇರುತ್ತದೆಯಲ್ಲವೇ. ಆದರೆ ಸ್ವಯಂನ್ನು ರಕ್ಷಿಸಿಕೊಳ್ಳುವುದು ತಮ್ಮ ಮೇಲಿರುತ್ತದೆ. ದುಃಖದ ಮಾತುಗಳು ಕೇಳುವುದರಲ್ಲಿ ಬರುತ್ತದೆ ಆದರೆ ಹೃದಯದಲ್ಲಿ ಪ್ರಭಾವವಾಗಬಾರದು. ಇದಕ್ಕೋಸ್ಕರ ಹೇಳಲಾಗುತ್ತದೆ ಭಿನ್ನ ಹಾಗು ಪ್ರಭುವಿಗೆ ಪ್ರಿಯ. ದುಃಖದ ಅಲೆಯಿಂದ ಭಿನ್ನವಾದರೆ ಆಗ ಪ್ರಭುವಿಗೆ ಪ್ರಿಯರಾಗುತ್ತೇವೆ. ಎಷ್ಟು ಭಿನ್ನ ಅಷ್ಟೇ ಪ್ರಿಯರು. ತಮ್ಮನ್ನು ತಾವು ನೋಡಿಕೊಳ್ಳಿ ನಾನು ಎಷ್ಟು ಅತೀತವಾಗಿರುತ್ತೇನೆಂದು? ಎಷ್ಟು ಅತೀತವಾಗುತ್ತಾ ಹೋಗುತ್ತೀರೋ ಅಷ್ಟೇ ಸಹಜ ಪರಮಾತ್ಮನ ಪ್ರೀತಿಯ - ಅನುಭವ ಮಾಡುತ್ತೀರಿ. ಪ್ರತಿನಿತ್ಯ ಚೆಕ್ ಮಾಡಿಕೊಳ್ಳಿ ನಾನು ಎಷ್ಟು ಪ್ರಿಯನಾಗಿದ್ದೇನೆಂದು. ಏಕೆಂದರೆ ಈ ಪ್ರೀತಿ ಪರಮಾತ್ಮನ ಪ್ರೀತಿಯಾಗಿದೆ ಮತ್ತೆ ಯಾವುದೇ ಯುಗದಲ್ಲಿ ಪ್ರಾಪ್ತಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಎಷ್ಟು ಪ್ರಾಪ್ತಿ ಮಾಡಿಕೊಳ್ಳಬೇಕು ಅಷ್ಟು ಈಗ ಮಾಡಿಕೊಳ್ಳಬೇಕು. ಇಂದಿಲ್ಲವೆಂದರೆ ಎಂದೆದಿಗೂ ಇಲ್ಲ. ಮತ್ತು ಎಷ್ಟು ಸ್ವಲ್ಪ ಸಮಯ ಈ ಪರಮಾತ್ಮನ ಪ್ರೀತಿಯ ಪ್ರಾಪ್ತಿಯದಾಗಿದೆ. ಸ್ವಲ್ಪ ಸಮಯದಲ್ಲಿ ಬಹಳ ಸಮಯದಲ್ಲಿ ಅನುಭವ ಮಾಡಬೇಕಾಗಿದೆ. ಹಾಗಾದರೆ ಮಾಡುತ್ತಿದ್ದಿರಾ? ಪ್ರಪಂಚದವರು ಖುಷಿಗೋಸ್ಕರ ಸಂಪತ್ತನ್ನು ಖರ್ಚು ಮಾಡುತ್ತಾರೆ ಮತ್ತು ತಮಗೆ ಸಹಜ ಅವಿನಾಶಿ ಖುಷಿಯ ಖಹಾಗೆ ಸಿಕ್ಕಿ ಬಿಟ್ಟಿದೆ. ಏನಾದರೂ ಖರ್ಚು ಮಾಡಿದ್ದೀರೇನು? ಖುಷಿಯ ಮುಂದೆ ಖರ್ಚು ಮಾಡುವಂತಹ ವಸ್ತು ಯಾವುದು, ಕೊಡುವುದಕ್ಕೆ ಏನಿದೆ? ಇದೇ ಖುಷಿಯ ಗೀತೆಯನ್ನು ಹಾಡುತ್ತಾ ಇರಿ ಏನು ಪಡೆದುಕೊಳ್ಳಬೇಕಿತ್ತೋ ಅದನ್ನು ಪಡೆದುಕೊಂಡುಬಿಟ್ಟೆ. ಪಡೆದುಕೊಂಡಿದ್ದೀರಲ್ಲವೇ? ಯಾವಾಗ ಯಾವುದೇ ವಸ್ತು ಸಿಕ್ಕಿ ಬಿಡುತ್ತದೆಯೆಂದರೆ ಖುಷಿಯಲ್ಲಿ ನರ್ತನೆ ಮಾಡುತ್ತಿರುತ್ತಾರೆ ಅನ್ಯರಿಗೂ ಖುಷಿಯನ್ನು ಹಂಚುತ್ತಾ ಹೋಗಿ. ಎಷ್ಟು ಹಂಚುತ್ತಾಹೋಗುತ್ತೀರೋ ಅಷ್ಟು ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ ಹಂಚುವುದು ಎಂದರೆ ಹೆಚ್ಚಿಸಿಕೊಳ್ಳುವುದು. ಯಾರೇ ಸಂಬಂಧದಲ್ಲಿ ಬರಲಿ ಅವರು ಅನುಭವ ಮಾಡಲಿ ಇವರಿಗೆ ಯಾವುದೋ ಶ್ರೇಷ್ಠ ಪ್ರಾಪ್ತಿ ಸಿಕ್ಕಿದೆಯೆಂದು. ಖುಷಿಯಿದೆ ಏಕೆಂದರೆ ಪ್ರಪಂಚದಲ್ಲಿ ಪ್ರತಿಯೊಂದು ಸಮಯವು ದುಃಖವಿದೆ ಮತ್ತು ತಮ್ಮ ಹತ್ತಿರ ಪ್ರತಿ

ಸಮಯ ಖುಷಿಯದೆ ದುಃಖಿಗಳಿಗೆ ಖುಷಿಯನ್ನು ಕೊಡುವುದು. ಇದೇ ಎಲ್ಲದಕ್ಕಿಂತ ದೊಡ್ಡಕ್ಕಿಂತ ದೊಡ್ಡ ಪುಣ್ಯವಾಗಿದೆ. ಹಾಗಾದರೆ ಎಲ್ಲರೂ ನಿರ್ವಿಘ್ನರಾಗಿ ಮುಂದೆ ಹಾರುತ್ತಾ ಇದ್ದೀರೋ ಅಥವಾ ಚಿಕ್ಕ ಚಿಕ್ಕ ವಿಘ್ನಗಳು ತಡೆಯುತ್ತದೆಯೇ? ವಿಘ್ನಗಳ ಕೆಲಸವಾಗಿದೆ ಬರುವುದು ಮತ್ತು ತಮ್ಮ ಕೆಲಸವಾಗಿದೆ ವಿಜಯದ ಪ್ರಾಪ್ತಿ ಮಾಡಿಕೊಳ್ಳುವುದು ಯಾವಾಗ ? ನಿನ್ನ ತನ್ನ ಕಾರ್ಯವನ್ನು ಚೆನ್ನಾಗಿ ಮಾಡುತ್ತಿದೆ ತಾವು ಮಾ|| ಸರ್ವ ಶಕ್ತಿವಂತರು ತಮ್ಮ ವಿಜಯದ ಕಾರ್ಯವನ್ನು ಸದಾ ಸಫಲರಾಗಿ, ಸದಾ ಈ ನೆನಪನ್ನು ಇಟ್ಟುಕೊಳ್ಳಿ ನಾವು ವಿಘ್ನ ವಿನಾಶಕ ಅತ್ಮರಾಗಿದ್ದೇವೆ. ವಿಘ್ನ ವಿನಾಶದ ಯಾವ ನೆನಪಾರ್ಥವಿದೆಯೋ ಅದರ ಪ್ರತ್ಯಕ್ಷ ಅನುಭವವನ್ನು ಮಾಡುತ್ತಿದ್ದಿರಲ್ಲವೇ. ಒಳ್ಳೆಯದು.

2.ಅಚಲ ಸ್ಥಿತಿಯನ್ನು ಮಾಡಿಕೊಳ್ಳುವುದಕ್ಕೆ ಮಾ॥ ಸರ್ವಶಕ್ತಿವಂತ ಟೈಟಲ್‌ನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ:- ಸ್ವಯಂನ್ನು ಸದಾ ಸರ್ವ ಖಜಾನೆಗಳಿಂದ ಸಂಪನ್ನವಾಗಿ ಅನುಭವ ಮಾಡುತ್ತೀರಾ? ಏಕೆಂದರೆ ಯಾರು ಸಂಪನ್ನರಾಗಿರುತ್ತಾರೆ? ಸಂಪನ್ನತೆಯ ಲಕ್ಷಣವಾಗಿದೆ ಅವರು ಅಚಲರಾಗಿರುತ್ತಾರೆ, ಏರುಪೇರಿನಲ್ಲಿ ಬರುವುದಿಲ್ಲ. ಎಷ್ಟು ಖಾಲಿಯಿರುತ್ತದೆ ಅಷ್ಟು ಏರುಪೇರಾಗುತ್ತದೆ. ಯಾವುದೇ ಪ್ರಕಾರದ ಏರುಪೇರು. ಭಲೆ ಸಂಕಲ್ಪದಿಂದ, ಭಲೆ ವಾಣಿಯಿಂದ, ಭಲೆ ಸಂಬಂಧ-ಸಂಪರ್ಕದಿಂದ, ಒಂದುವೇಳೆ ಯಾವುದೇ ಪ್ರಕಾರದ ಏರುಪೇರಾಗುತ್ತದೆ ಎಂದರೆ ಸಿದ್ಧವಾಗಿದೆ ಖಜಾನೆಗಳಿಂದ ಸಂಪನ್ನವಾಗಿಲ್ಲ. ಸಂಕಲ್ಪದಲ್ಲೂ, ಸ್ವಪ್ನದಲ್ಲೂ ಅಲ, ಏಕೆಂದರೆ ಎಷ್ಟೆಷ್ಟು ಮಾ॥ ಸರ್ವ ಶಕ್ತಿವಾನ್ ಸ್ವರೂಪದ ಸ್ಮೃತಿ ಇಮರ್ಜ್ ಆಗುತ್ತದೆಯೋ ಅಷ್ಟೇ ಈ ಏರುಪೇರು ಮರ್ಜ್ ಆಗುತ್ತಾ ಹೋಗುತ್ತದೆ. ಮಾ॥ ಸರ್ವ ಶಕ್ತಿವಾನನ ಸ್ಮೃತಿ ಪ್ರತ್ಯಕ್ಷ ರೂಪದಲ್ಲಿ ಇಮರ್ಜ ಆಗಬೇಕು. ಹೇಗೆ ಶರೀರದ ಉದ್ಯೋಗ ಇಮರ್ಜ್ ಆಗಿರುತ್ತದೆ, ಮರ್ಜ್ ಆಗಿರುವುದಿಲ್ಲ. ಅದೇ ರೀತಿ ಈ ಬ್ರಾಹ್ಮಣ ಜನ್ಮದ ಉದ್ಯೋಗ ಇಮರ್ಜ್ ರೂಪದಲ್ಲಿರಲಿ. ಚೆಕ್ ಮಾಡಿಕೊಳ್ಳಿ ಇಮರ್ಜ್ ಇರುತ್ತದೆಯೆ ಅಥವಾ ಮರ್ಜ್ ಆಗಿಬಿಡುತ್ತದೆಯೇ? ಇಮರ್ಜ್ ಇರುತ್ತದೆಯೆಂದರೆ ಅದರ ಲಕ್ಷಣವಾಗಿದೆ ಪ್ರತಿಯೊಂದು ಕರ್ಮದಲ್ಲಿ ನಶೆಯಿರುತ್ತದೆ ಮತ್ತು ಅನ್ಯರಿಗೂ ಅನುಭವವಾಗುತ್ತದೆ ಇವರು ಶಕ್ತಿಶಾಲಿ ಅತ್ಮರಾಗಿದ್ದಾರೆ. ಹೇಳಲಾಗುತ್ತದೆ ಏರುಪೇರಿನಂದ ದೂರ ಅಚಲ ಅಚಲಘರ್ ತಮ್ಮದೇ ನೆನಪಾರ್ಥವಾಗಿದೆ. ತಮ್ಮ ಕರ್ತವ್ಯನ್ನು ಸದಾ ನೆನಪಿಟ್ಟುಕೊಳ್ಳಿ ನಾನು ಮಾ|| ಸರ್ವ ಶಕ್ತಿವಾನ್ ಆಗಿದ್ದೇನೆ. ಏಕೆಂದರೆ ಇತ್ತೀಚೆಗೆ ಸರ್ವ ಅತ್ಮರು ಅತೀ ನಿರ್ಬಲರಾಗಿದ್ದರೆ ನಿರ್ಬಲ ಅತ್ಮರಿಗೆ ಶಕ್ತಿ ಬೇಕಾಗಿದೆ. ಶಕ್ತಿ ಯಾರು ಕೊಡುತ್ತಾರೆ? ಯಾರು ಸ್ವಯಂ ಮಾ|| ಸರ್ವಶಕ್ತಿವಂತರಾಗಿರುತ್ತಾರೆ. ಯಾವುದೇ ಅತ್ಮನ ಜೊತೆ ಮಿಲನ ಮಾಡಿದರೆ ನಿಮ್ಮ ಮಾತುಗಳನ್ನು ತಿಳಿಸುತ್ತೀರೇನು. ಬಲಹೀನ ಮಾತುಗಳನ್ನು ತಿಳಿಸುತ್ತಿರಲ್ಲವೇ ಯಾವುದನ್ನು ಮಾಡುವುದಕ್ಕೆ ಇಷ್ಟ ಪಡುತ್ತೀರಾ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಇದರ ಪ್ರಮಾಣವಾಗಿದೆ ಬಲಹೀನವಾಗಿದೆ ಮತ್ತು ತಾವು ಏನು ಸಂಕಲ್ಪ ಮಾಡುತ್ತೀರಿ ಅದನ್ನು ಕಲ್ಪದಲ್ಲಿ ತರಬಹುದು. ಮಾ॥ ಸರ್ವ ಶಕ್ತಿವಂತನ ಚಿಹ್ನೆಯಾಗಿದೆ ಸಂಕಲ್ಪ ಮತ್ತು ಕರ್ಮ ಎರಡೂ ಸಮಾನವಾಗಿರುತ್ತದೆ. ಈ ರೀತಿಯಲ್ಲ ಸಂಕಲ್ಪ ಬಹಳ ಶ್ರೇಷ್ಠವಾಗಿದೆ ಮತ್ತು ಕರ್ಮ ಮಾಡುವುದರಲ್ಲಿ ಶ್ರೇಷ್ಠ ಸಂಕಲ್ಪವನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಇವರನ್ನು ಮಾ|| ಸರ್ವಶಕ್ತಿವಂತರೆಂದು ಹೇಳುವುದಿಲ್ಲ. ಚೆಕ್ ಮಾಡಿಕೊಳ್ಳಿ ಯಾವ ಶ್ರೇಷ್ಠ ಸಂಕಲ್ಪವಿರುತ್ತದೆ ಅದು ಕರ್ಮದವರೆಗೂ ಬರುತ್ತದೆಯೇ ಅಥವಾ ಬರುವುದಿಲ್ಲವೇ? ಮಾ|| ಸರ್ವಶಕ್ತಿವಂತರ ಚಿಹ್ನೆಯಾಗಿದೆ ಯಾವ ಶಕ್ತಿ ಯಾವ ಸಮಯದಲ್ಲಿ ಅವಶ್ಯಕವಿದೆ ಆ ಸಮಯದಲ್ಲಿ ಆ ಶಕ್ತಿ ಕಾರ್ಯದಲ್ಲಿ

ಬರಬೇಕು. ಈ ರೀತಿಯಿದೆಯೇ ಅಥವಾ ಆಹ್ವಾನ ಮಾಡುತ್ತಿರಾ. ಸ್ವಲ್ಪ ಸಮಯದ ನಂತರ ಬರುತ್ತದೆಯೇ? ಯಾವಾಗ ಯಾವುದೇ ಮಾತು ಪೂರ್ಣವಾಗಿ ಬಿಡುತ್ತದೆ. ಸ್ಮೃತಿಯಲ್ಲಿ ಬಂದರೆ ಈ ರೀತಿಯಲ್ಲ, ಈ ರೀತಿ ಮಾಡಿದರೆ. ಇದಕ್ಕೆ ಹೇಳಲಾಗುತ್ತದೆ ಸಮಯದಲ್ಲಿ ಕೆಲಸದಲ್ಲಿ ಬರಲಿಲ್ಲವೆಂದು, ಹೇಗೆ ಸ್ಥೂಲ ಕರ್ಮೇಂದ್ರಿಯಗಳು ಆರ್ಡರ್‌ನಂತೆ ನಡೆಯುತ್ತವೆಯಲ್ಲವೇ, ಕೈಯನ್ನು ಯಾವಾಗ ಬೇಕೋ, ಹೇಗೆ ಬೇಕೋ, ಹಾಗೆ ನಡೆಸಬಹುದಲ್ಲವೇ. ಇದೇ ರೀತಿ ಸೂಕ್ಷ್ಮ ಶಕ್ತಿಗಳು ಇಷ್ಟು ಕಂಟ್ರೋಲ್‌ನಲ್ಲಿ ಇರಬೇಕು ಯಾವ ಸಮಯದಲ್ಲಿ ಯಾವ ಶಕ್ತಿ ಬೇಕೋ ಕಾರ್ಯದಲ್ಲಿ ತೊಡಗಿಸಬೇಕೋ ಆ ಶಕ್ತಿ ಇದೆಯೇ? ಕಂಟ್ರೋಲಿಗ್ ಪವರ್ ಇದೆಯೇ? ಈ ರೀತಿ ಯೋಚನೆ ಮಾಡುವುದಿಲ್ಲವೇ ಇಷ್ಟವಂತು ಇರಲಿಲ್ಲ ಆದರೆ ಆಗಿಹೋಯಿತು. ಸದಾ ತನ್ನ ಕಂಟ್ರೋಲಿಂಗ್ ಪವರ್‌ನ್ನು ಚೆಕ್ ಮಾಡಿಕೊಳ್ಳುತ್ತ ಶಕ್ತಿಶಾಲಿಯಾಗುತ್ತಾ ಹೋಗಿ, ಎಲ್ಲರು ಹಾರುವ ಕಲೆಯವರಾಗಿದ್ದೀರಾ ಅಥವಾ ಇಳಿಯುವ ಕಲೆಯವರಾಗಿದ್ದೀರಾ ಯಾರಾದರು ಹಾರುವ ಕಲೆಯವರು? ಅಥವಾ ಕೆಲವೊಮ್ಮೆ ಹಾರುವುದು ಕೆಲವೊಮ್ಮೆ ಇಳಿಯುವುದು, ಕೆಲವೊಮ್ಮೆ ನಡೆಯುವ ಕಲೆಯಾಗಿ ಬಿಡುತ್ತದೆಯೇ? ಬದಲಾವಣೆಯಾಗುತ್ತದೆ ಅಥವಾ ಮುಂದೆವರೆಯುತ್ತಾ ಹೋಗುತ್ತೀರಾ? ಯಾವುದೇ ವಿಘ್ನ ಬಂದರೆ ಎಷ್ಟು ಸಮಯದಲ್ಲಿ ವಿಜಯಿಗಳಾಗುತ್ತಿರಿ?' ಸಮಯ ಹಿಡಿಸುತ್ತದೆಯಲ್ಲವೇ? ಏಕೆಂದರೆ ಜ್ಞಾನಪೂರ್ಣರಾಗಿದ್ದೀರಲ್ಲವೆ', ವಿಘ್ನಗಳದ್ದು ಜ್ಞಾನವಿದೆ ಜ್ಞಾನದ ಶಕ್ತಿಯಿಂದ ವಿಘ್ನ ಯುದ್ಧವೇ ಮಾಡುವುದಿಲ್ಲ ಆದರೆ ಸೋತು ಬಿಡುತ್ತೀರಿ. ಇದಕ್ಕೆ ಮಾ॥ ಸರ್ವಶಕ್ತಿವಾನ್ ಎಂದು ಕರೆಲಾಗುತ್ತದೆ. ಹಾಗಾದರೆ ಅಮೃತವೇಳೆಯಿಂದ ಈ ಕರ್ತವ್ಯವನ್ನು ಇಮರ್ಜ್ ಮಾಡಿಕೊಳ್ಳಿ ಮತ್ತು ನಂತರ ಇಡೀ ದಿನ ಚೆಕ್ ಮಾಡಿಕೊಳ್ಳಿ. ಒಳ್ಳೆಯದು.

ರಿವೈಸ್ ಕೋರ್ಸ್ 02-12-1993

***ನಂಬರ್‌ವನ್ ಆಗುವುದಕ್ಕೆ ಗುಣಮೂರ್ತಿಯಾಗಿ ಗುಣದಾನವನ್ನು ಮಾಡುವಂತಹ ಮಹಾದಾನಿಯಾಗಿ.***

ಅಖಂಡ ಮಹಾದಾನಿ ಸದಾ ಮೂರು ವಿಧವಾದ ದಾನಗಳನ್ನು ಮಾಡುವುದರಲ್ಲಿ ವ್ಯಸ್ತರಾಗಿರುತ್ತಾರೆ. 1.ಮನಸ್ಸಿನಿಂದ ಶಕ್ತಿಗಳ ದಾನ, 2.ವಾಣಿಯ ಮುಖಾಂತರ ಜ್ಞಾನದಾನ, 3.ಕರ್ಮಗಳ ಮುಖಾಂತರ ಗುಣ ದಾನ. ಫಲಿತಾಂಶದಲ್ಲಿ ವಾಣಿಯ ಮುಖಾಂತರ ಜ್ಞಾನದ ಧಾನವನ್ನು ಮೆಜಾರಿಟಿ ಮಾಡುತ್ತಿದ್ದಾರೆ. ಮನಸ್ಸಿನ ಮುಖಾಂತರ ಶಕ್ತಿಗಳ ದಾನವನ್ನು ಯಥಾಶಕ್ತಿ ಮಾಡುತ್ತಿದ್ದಾರೆ ಮತ್ತು ಕರ್ಮದ ಮುಖಾಂತರ ಗುಣದ ದಾನ ಬಹಳ ಕಡಿಮೆ ಮಾಡುವವರಿದ್ದಾರೆ. ನಂಬರ್‌ವನ್ ಆತ್ಮ ಪ್ರತಿಯೊಂದು ಶ್ರೇಷ್ಠ ಕರ್ಮದಲ್ಲಿ ತಾನೇ ನಿಮಿತ್ತವಾಗಿ ಇತರರಿಗೆ ಆ ಕಾರ್ಯ ಸರಳವಾಗುವುದಕ್ಕೆ ಮಾದರಿ ಆಗುತ್ತಾರೆ. ಇತರರನ್ನು ನೋಡುವುದು, ಅವರು ತಯಾರಾದರೆ ನಾನು ತಯಾರಾಗುತ್ತೇನೆ ಎಂದಾಗ ತಯಾರಾಗುವವರು ಮೊದಲ ನಂಬರ್‌ನವರಾಗುತ್ತಾರೆ ಮತ್ತು ನೀವು ಸ್ವತಹವಾಗಿ ಎರಡನೇ ನಂಬರ್‌ನವರಾಗುತ್ತೀರಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಮಾಸ್ಟರ್ ಸರ್ವಶಕ್ತಿವಂತನು, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಚಲ ಭವ! ಅಖಂಡ ಭವ! ದ ವರದಾನಿ.

2. ನಾನು ಸಹಜವಾಗಿ ನಿರಂತರ ಸೇವೆಯನ್ನು ಮಾಡುವ ಅಖಂಡ ಮಹಾದಾನಿ.

3. ನಾನು ಸದಾ ಮನಸ್ಸಿನ ಮೂಲಕ ಶಕ್ತಿಗಳ ದಾನ, ವಾಣಿಯ ಮುಖಾಂತರ ಜ್ಞಾನದ ದಾನ, ಕರ್ಮಗಳ ಮುಖಾಂತರ ಗುಣದ ದಾನವನ್ನು ಸಮಾನವಾಗಿ ಮಾಡುವ ಅಖಂಡ ಮಹಾದಾನಿಯಾಗಿದ್ದೇನೆ.

4. ನಾನು ದಿವ್ಯ ಗುಣಗಳು ಎಂಬ ಪ್ರಭು ಪ್ರಸಾದವನ್ನು ಎಲ್ಲರಿಗೂ ತಿನ್ನಿಸುತ್ತಾ ಅರ್ಥಾತ್ ಹಂಚುತ್ತಾ ಫರಿಶ್ತಾನಿಂದ ದೇವತೆಯಾಗಿದ್ದೇನೆ.

5. ನಾನು ಯಾವ ಆತ್ಮನಿಗೆ ಯಾವ ಶಕ್ತಿಯ ಅವಶ್ಯಕತೆ ಇದೆಯೋ ಆ ಆತ್ಮನಿಗೆ ಮನಸಾ ಮುಖಾಂತರ ಶಕ್ತಿಯ ದಾನ ಅಥವಾ ಸಹಯೋಗ ಮತ್ತು ಕರ್ಮದ ಮುಖಾಂತರ ಸದಾ ಸ್ವಯಂನ ಜೀವನದ ಗುಣಮೂರ್ತಿಯಾಗಿ ಪ್ರತ್ಯಕ್ಷ ಮಾದರಿಯಾಗಿ ಅನ್ಯರಿಗೂ ಸಹ ಸಹಜ ಗುಣವನ್ನು ಧಾರಣೆ ಮಾಡುವುದಕ್ಕೆ ಸಹಯೋಗವನ್ನು ಕೊಟ್ಟಿದ್ದೇನೆ. (ಇದನ್ನೇ ಗುಣ ದಾನ ಎಂದು ಕರೆಯುತ್ತಾರೆ)

6. ನಾನು ಪ್ರತಿಯೊಂದು ಶ್ರೇಷ್ಠ ಕಾರ್ಯದಲ್ಲಿ ನಿಮಿತ್ತನಾಗಿ ಅನ್ಯರಿಗೆ ಆ ಕಾರ್ಯ ಸರಳವಾಗುವುದಕ್ಕೆ ಮಾದರಿಯಾಗಿರುವ ನಂಬರ್‌ವನ್ ಆತ್ಮ.

7. ನಾನು ಸ್ವಯಂ ಅನ್ನು ನಿಮಿತ್ತ, ಪ್ರತ್ಯಕ್ಷ ಪ್ರಮಾಣವನ್ನಾಗಿ ಮಾಡಿಕೊಂಡಿರುವ ಅರ್ಜುನನು ಅರ್ಥಾತ್ ಮೊದಲನೆಯ ನಂಬರ್ ಆತ್ಮ.

8. ನಾನು ಸದಾ ಗುಣಮೂರ್ತಿಯಾಗಿ ಎಲ್ಲರನ್ನೂ ಗುಣಮೂರ್ತಿಯನ್ನಾಗಿ ಮಾಡುವಂತಹ ವಿಶೇಷ ಕರ್ತವ್ಯವನ್ನು ಮಾಡುತ್ತಿದ್ದೇನೆ.

9. ನಾನು ಸ್ವಯಂನ ಮತ್ತು ಸರ್ವರ ನಿರ್ಬಲತೆಗಳನ್ನು ಸಮಾಪ್ತಿ ಮಾಡುವುದರಲ್ಲಿ ಮೊದಲನೇ ನಂಬರ್‌ನಲ್ಲಿದ್ದೇನೆ.